# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 93, ವಸಂತನಗರ

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:29-11-2021 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಮಾನ್ಯ ನೋಡೆಲ್ ಅಧಿಕಾರಿಗಳು ವಿ.ಸಿ ಮುಖಾಂತರ ಸಭೆಯನ್ನು ನಡೆಸಿಕೊಟ್ಟರು ಹಾಗೂ ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ.ಮಂಜುಳಮ್ಮ | ನೋಡಲ್ ಆಧಿಕಾರಿಗಳು | |
| 2 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು | |
| 3 | ಶ್ರೀಮತಿ. ಚಿತ್ರಾ ವೆಂಕಟೇಶ್ | ಸದಸ್ಯರು | |
| 4 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 5 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು | |
| 6 | ಶ್ರೀ. ಮಹಮದ್ ಜಾವೇದ್.ಎ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 7 | ಶ್ರೀ.ರೇಣುಕಾಂಬ | ಹಿರಿಯ ಆರೋಗ್ಯ ನಿರೀಕ್ಷಕರು | |
| 8 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 9 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 10 | ಶ್ರೀಮತಿ ಮಂಜುಳಮ್ಮ | ತೋಟಗಾರಿಕೆ ಅಧೀಕ್ಷಕರು | |

-2-

## ಗೈರು ಹಾಜರಾದ ಸದಸ್ಯರು ಮತ್ತು ಅಧಿಕಾರಿಗಳು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಕೆ.ಜೆ.ಸಿ. ಕುಮಾರ್ | ಸದಸ್ಯರು | |
| 2 | ಶ್ರೀ.ರವೀಂದ್ರನಾಥ | ಸದಸ್ಯರು | |
| 3 | ಶ್ರೀಮತಿ.ಲಕ್ಷ್ಮಿದೇವಿ ಆನಂದ | ಸದಸ್ಯರು | |
| 4 | ಶ್ರೀಮತಿ.ಜಿ.ಕೆ.ವತ್ಸಲ | ಸದಸ್ಯರು | |
| 5 | ಶ್ರೀಮತಿ. ರಾಧಮ್ಮ | ಸದಸ್ಯರು | |
| 6 | ಶ್ರೀ.ಬಿ.ವಿ ಸುರೇಶ್ | ಸದಸ್ಯರು | |
| 7 | ಶ್ರೀ.ಬಾನು ಪ್ರಕಾಶ್ | ಸದಸ್ಯರು | |
| 8 | ಶ್ರೀ.ಪ್ರಕಾಶ್‌ಚಂದ್ರ | ಸದಸ್ಯರು | |
| 9 | ಶ್ರೀ.ಸುನಿಲ್‌ಕುಮಾರ್ | ಸದಸ್ಯರು | |
| 10 | ಶ್ರೀ.ಕೋದಂಡರೆಡ್ಡಿ | ಸಹಾಯಕ ಅಭಿಯಂತರರು ಸ್ಮಾರ್ಟ್ ಸಿಟಿ | |
| 11 | ಶ್ರೀ.ನವೀನ್‌ಕುಮಾರ | ವೈದ್ಯಾಧಿಕಾರಿ ಶಿವಾಜಿನಗರ | |
| 12 | ಶ್ರೀ.ನಬಿ | ಆರಕ್ಷಕ ಉಪ ನೀರಿಕ್ಷಕರು | |
| 13 | ಶ್ರೀ.ದುರ್ಗಾಪ್ರಸಾದ್ | ಸಹಾಯಕ ಅಭಿಯಂತರರು ವಿದ್ಯುತ್ ಇಲಾಖೆ ಬೀದಿ ನಿರ್ವಹಣೆ | |
| 14 | ಶ್ರೀಮತಿ.ವೀಣಾ | ಸಹಾಯಕ ಕಂದಾಯ ಅಧಿಕಾರಿ | |

## ದಿನಾಂಕ:29–11–2021 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗೆಳು

1) ಶ್ರೀ.ಧರ್ಮರಾಜ್.ಜಿ.ನಾಯಕ್ ಸಹಾಯಕ ಅಭಿಯಂತರರು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಸಮಿತಿ ಸದಸ್ಯರಾದ ಶ್ರೀಮತಿ. ಚಿತ್ರಾವೆಂಕಟೇಶ ರವರು ಮಾತಾನಾಡಿ ಬಿಬಿಎಂಪಿ ವತಿಯಿಂದ ಕುಮಾರ ಪಾರ್ಕ್‌ನಲ್ಲಿರುವ ಶೌಚಾಲಯವನ್ನು ನವೀಕರಿಸಲು ಮನವಿ ಮಾಡಿದರು. ಮತ್ತು ರೈಲ್ವೆ ಸಾಮಾನಾಂತರ ರಸ್ತೆಯ ಕಾಮಗಾರಿಯನ್ನು ಮತ್ತು ಪಾದಚಾರಿ

ಮಾರ್ಗವನ್ನು ಅವ್ಯವಸ್ಥೆಯಲ್ಲಿರುವುದರ ಬಗ್ಗೆ ರಸ್ತೆ ಮೂಲಭೂತ ಸೌಕರ್ಯ ವಿಭಾಗಕ್ಕೆ ಕ್ರಮ ಕೈಗೊಳ್ಳಲು ಸೂಚಿಸಿದೆ. ಬೀದಿ ನಾಯಿಗಳ ನಿರ್ವಹಣೆಯಲ್ಲಿ ವಾರ್ಡ್ ಕಮಿಟಿ ಸದಸ್ಯರೊಂದಿಗೆ ಸಹಕರಿಸುವಂತೆ ಸೂಚಿಸಿದರು. ಸುಬ್ಬಯ ಬಡಾವಣೆಯ ಶಾಪಿಂಗ್ ಸ್ಟ್ರೀಟ್‌ನಲ್ಲಿನ ಒಳಚರಂಡಿ ಲೈನ್‌ನ್ನು ಹೆಚ್ಚಿನ ಗಾತ್ರಕ್ಕೆ ಮಾರ್ಪಾಡಿಸಲು ಸಲಹೆ ನೀಡಿದರು. ಪಾಲಿಕೆ ಶಾಲೆಗಳಲ್ಲಿ ಕೂಲಿ ಕಾರ್ಮಿಕರ ಮಕ್ಕಳಿಗೆ ಆರ್.ಟಿ.ಇ ಅಡಿಯಲ್ಲಿ ನ್ಯಾಯಸಮ್ಮತವಾಗಿ ಪ್ರವೇಶ ಕಲ್ಪಿಸುವಂತೆ ಶಿಕ್ಷಣ ಇಲಾಖೆಯವರಿಗೆ ಸೂಚಿಸಿದರು.

4) ಶ್ರೀ ರಾಜ್‌ದುಗ್ಗರ್ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಬೀದಿ ದೀಪಗಳ ಬೆಳಕನ್ನು ಹೆಚ್ಚಿಸಲು ಶಾಶ್ವತವಾಗಿ ಸೋಡಿಯಂ ಬಲ್ಬ್‌ಗಳನ್ನು ಅಳವಡಿಸಲು ಸೂಚಿಸಿದರು. ವಸಂತನಗರ 7ನೇ ಅಡ್ಡರಸ್ತೆಯ ಎಡಗಡೆಯ ಉದ್ದಕ್ಕೂ ಗುಂಡಿಗಳು ಬಿದ್ದಿದ್ದು ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಇದಕ್ಕೆ ಶಾಶ್ವತ ಪರಿಹಾರ ಕೈಗೊಳ್ಳಲು ಸೂಚಿಸಿದರು. ಈ ಹಿಂದೆ ಚರ್ಚಿಸಿದಂತೆ ವಸಂತನಗರದಲ್ಲಿ 8ನೇ ಮುಖ್ಯರಸ್ತೆ (ಟಿ.ಗಂಗಪ್ಪ ರಸ್ತೆ), 5ನೇ ಅಡ್ಡರಸ್ತೆ (ಚನ್ನರಾಯಪ್ಪ ರಸ್ತೆ), 6ನೇ ಅಡ್ಡರಸ್ತೆ (ಆಂಜನೇಯ ದೇವಸ್ಥಾನ ಬೀದಿ), 7ನೇ ಅಡ್ಡರಸ್ತೆ ( ಮಾರಿಯಮ್ಮ ದೇವಸ್ಥಾನ ರಸ್ತೆ), 10ನೇ ಅಡ್ಡರಸ್ತೆ (ಕುಪ್ಪುಸ್ವಾಮಿ ನಾಯ್ಡು ಬೀದಿ) ಮತ್ತು ಕನ್ನಿಂಗ್ಯಾಂಮ್ ರಸ್ತೆಯನ್ನು ಸಂಪಂಗಿರಾಮಸ್ವಾಮಿ ದೇವಸ್ಥಾನ ಬೀದಿ ಎಂದು ಕರೆಯಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ನಾಮಫಲಕವನ್ನು ಹೈಗ್ರೌಂಡ್ಸ್ ಪೋಲಿಸ್ ಠಾಣೆಯ ಹತ್ತಿರದಲ್ಲಿ ಅಳವಡಿಸಲು ಸೂಚಿಸಿದರು. ಈ ಮೇಲೆ ವಿವರಿಸಿರುವ 6 ರಸ್ತೆಗಳ ಹೆಸರುಗಳ ಪರಂಪರೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಆಧುನಿಕ ನಾಮಫಲಕಗಳನ್ನು ಅಳವಡಿಸುವಂತೆ ಲಿಖಿತ ಮೂಲಕ ಮನವಿ ಮಾಡಿದರು. ಮಿಲ್ಲರ್ ರಸ್ತೆಯ ಪೋಲಿಸ್ ಠಾಣೆಯ ಪಕ್ಕದಲ್ಲಿನ ಟಿ.ಸಿಯನ್ನು ಸ್ಥಳಾಂತರಿಸಲು ಬೆಸ್ಕಾಂ ಇಲಾಖೆಗೆ ಸೂಚಿಸಿದರು.

5) ಸಮಿತಿ ಸದ್ಯರಾದ ಶ್ರೀಮತಿ.ಪ್ರೀಯಾಚೆಟ್ಟಿ ರವರು ಮಾತನಾಡಿ ಇತ್ತೀಚಿಗೆ BWSSB ಮತ್ತು ಬೆಸ್ಕಾಂ ಇಲಾಖೆಯವರಿಂದ ತುಂಬಾ ಕಳಪೆ ಪ್ರತಿಕ್ರೀಯೆ ಉಂಟಾಗುತ್ತಿದ್ದು, ಸದರಿಯವರಿಗೆ ಲಿಖಿತ ರೂಪದಲ್ಲಿ ಪತ್ರ ಬರೆಯಲು ಸೂಚಿಸಿದರು. ಚಾಲುಕ್ಯ ಹೋಟೆಲ್ ಪಕ್ಕದ ಹೈಪಾಯಿಂಟ್ ಸಮುಚ್ಚಯದ ಪ್ರವೇಶ ದ್ವಾರದಲ್ಲಿನ ಮರಗಳ ರೆಂಬೆಗಳನ್ನು ಪಾಲಿಕೆಯ ಅರಣ್ಯ ಇಲಾಖೆ ವತಿಯಿಂದ ಪೂರ್ವಾನುಮತಿ ಇಲ್ಲದೆ ಕತ್ತರಿಸಿರುವ ಬಗ್ಗೆ ಆಕ್ಷೇಪಣೆ ನೀಡಿ ಸದರಿಯವರಿಗೆ ನೋಟಿಸ್ ಜಾರಿಮಾಡಲು ಸೂಚಿಸಿದರು. ಜನಾಗ್ರಹ ಅನುದಾನದಲ್ಲಿ ಪ್ರತಿ ವಾರ್ಡ್‌ಗೆ ನೀಡಿರುವ 60.00 ಲಕ್ಷ ಅನುದಾನದಲ್ಲಿ ಫುಟ್‌ಪಾತ್ ರಿಪೇರಿ ಮತ್ತು ಕೊಳವೆ ಬಾವಿಗಳನ್ನು ಕೊರೆಯುವ ಬಗ್ಗೆ ವಾರ್ಡ್ ಸಮಿತಿಯವರ ಜೊತೆ ಚರ್ಚಿಸಿ, ಸ್ಥಳಗಳನ್ನು ಗುರುತಿಸಿಕೊಳ್ಳಲು ಸೂಚಿಸಿದರು. ವಾರ್ಡ್ ವ್ಯಾಪ್ತಿಯಲ್ಲಿನ ಕಸದ ಬ್ಲ್ಯಾಕ್ ಸ್ಪಾಟ್‌ಗಳನ್ನು ಶಾಶ್ವತವಾಗಿ ತೆಗೆದು ಹಾಕಲು ಸೂಚಿಸಿದರು.

6) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್–93, ವಸಂತನಗರ

ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್–93, ವಸಂತನಗರ

ಬಿ.ಬಿ.ಎಂ.ಪಿ